**ಸಾಕ್ಷಿಯನ್ನು ದಿ:06.01.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಮ್ಮ ಪತಿ ಮಲ್ಲಿಕಾರ್ಜುನರವರಿಗೆ ನೀವು ಅಲ್ಲದೇ ಇನ್ನೊಬ್ಬ ಪತ್ನಿ ಶಿವಮ್ಮ ರವರು ಇದ್ದಾರೆ ಎಂದರೆ ಸರಿ.

2. ನಿಮ್ಮ ಪತಿಯು ಅವರ ಕಿರಿಯ ಪತ್ನಿ ಶಿವಮ್ಮ ಹಾಗೂ ಅವರ ಮಗ ಮನು ರವರು ಕೊಣಸೂರು ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ.

3. ನೀವು ಮದುವೆಯಾದಾಗಿನಿಂದ ಕೊಣಸೂರು ಗ್ರಾಮ ಬಿಟ್ಟು ಹೆಬ್ಬಾಲೆಯಲ್ಲಿ ವಾಸವಿದ್ದೀರಾ ಎಂದರೆ, ಹೆಬ್ಬಾಲೆಯಲ್ಲಿ ಸುಮಾರು 20 ವರ್ಷದಿಂದ ಇದ್ದೇವೆ, ಮೊದಲು ಒಟ್ಟು ಕುಟುಂಬದಲ್ಲಿ ಇದ್ದೆವು.

4. ನನ್ನ ಮಾವನ ಹೆಸರು ಗಿರಿಮಲ್ಲಯ್ಯ. ಅವರನ್ನು ನಾನು ನೋಡಿದ್ದೇನೆ. ಅವರು ಯಾವಾಗ ಮೃತರಾದರು ಎಂದು ನನಗೆ ಈಗ ನೆನಪಿಲ್ಲ.

5. ಈ ದಾವಾ ಸ.ನಂ.57/2. ಸ.ನಂ.57 ಒಟ್ಟು ಎಷ್ಟು ವಿಸ್ತೀರ್ಣ ಹಾಗೂ ಪೋಡು ಇವೆ ಎಂದರೆ ನನಗೆ ಗೊತ್ತಿಲ್ಲ.

6. ನಾನು 2 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ.

7. ಈ ದಾವೆಗೆ ಪ್ರತಿವಾದಿಗಳು ಏನು ತಕರಾರು ಹಾಕಿದ್ದಾರೆ ಎಂದರೆ, ನಮಗೆ ಜಮೀನು ಬರಬೇಕು ಎಂದು ಹಾಕಿದ್ದಾರೆ.

8. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ಗೊತ್ತು. ಅದನ್ನು ಕನ್ನಡದಲ್ಲಿ ಬರೆಯಲಾಗಿದೆ. ಅದನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ.

9. ದಾವಾ ಸ್ವತ್ತಿನ ಬಗ್ಗೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ, ನನ್ನ ಪತಿ ಇಟ್ಟುಕೊಂಡಿದ್ದಾರೆ ಎಂದು ನುಡಿಯುತ್ತಾರೆ.

10. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಏನೇನು ದಾಖಲೆಗಳು ಎಂದರೆ, ಪಹಣಿ, ದಾನಪತ್ರ, ಎಂ.ಆರ್. ಹಾಜರುಪಡಿಸಿದ್ದೇನೆ.

11. ಈ ದಾವೆಯನ್ನು ಪ್ರತಿವಾದಿಗಳು ನಮಗೆ ದಾವಾ ಸ್ವತ್ತಿಗೆ ತೊಂದರೆ ಕೊಡದಂತೆ ಹಾಕಿದ್ದೇನೆ.

12. ದಾವಾ ಜಮೀನು 1 ಎಕರೆ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆಃ ಚಂದ್ರ ರವರ ಜಮೀನು, ಅವರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆಃ ಮಲ್ಲೇಶ ರವರ ಜಮೀನು, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ಓಣಿ.

13. ಪೂರ್ವಕ್ಕೆ ಇರುವ ಚಂದ್ರಪ್ಪ ರವರ ಪೂರ್ವಕ್ಕೆ ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ಯಾರ ಜಮೀನು ಎಂದರೆ ನನಗೆ ಗೊತ್ತಿಲ್ಲ.

14. ಪಶ್ಚಿಮಕ್ಕೆ ಇರುವ ಮಲ್ಲೇಶ ರವರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಅವರ ಉತ್ತರಕ್ಕೆ ಪಶ್ಚಿಮಕ್ಕೆ ಹಾಗೂ ದಕ್ಷಿಣಕ್ಕೆ ಯಾರ ಜಮೀನು ಎಂದರೆ ನನಗೆ ಗೊತ್ತಿಲ್ಲ.

15. ದಕ್ಷಿಣಕ್ಕೆ ಇರುವ ಓಣಿ ನಂತರ ಯಾರ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

16. ಉತ್ತರಕ್ಕೆ ಇರುವ ರಸ್ತೆ ನಂತರ ಯಾರ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

17. ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆಃ ಪಂಚಾಕ್ಷರಿ ಮತ್ತು ಮಲ್ಲೇಶ ರವರ ಜಮೀನು, ಉತ್ತರಕ್ಕೆಃ ಸ.ನಂ.57/1 ರ ಸೋಮೇಶ ರವರ ಜಮೀನು, ಉತ್ತರಕ್ಕೆಃ ಸ.ನಂ.57/3 ರ ಸೋಮೇಶ ರವರ ಜಮೀನು, ಸದರಿ ಚಕ್ಕುಬಂದಿಯಲ್ಲಿನ 1 ಎಕರೆ 2 ಗುಂಟೆ ಜಮೀನಿಗೆ ನಿಮಗೆ ಹಕ್ಕು ಸ್ವಾಧೀನ, ಅನುಭವ ಇದೆಯಾ ಎಂದರೆ, ಇದೆ.

18. ದಾವಾ ಸ್ವತ್ತು ನನ್ನ ಪತಿಗೆ ನಮಗೆ ಕೊಟ್ಟಿದ್ದಾರೆ. ನನ್ನ ಪತಿಗೆ ಹೇಗೆ ಬಂದಿತು ಎಂದು ನಾನು ತಿಳಿದುಕೊಂಡಿಲ್ಲ.

19. ಸ.ನಂ.57 ರ ಜಮೀನುಗಳು ನಿಮ್ಮ ಮಾವ ಗಿರಿಮಲ್ಲಯ್ಯ ರವರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ, ನನ್ನ ಪತಿಯ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನನ್ನ ಪತಿಯ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ.

20. ಸ.ನಂ.57 ರಲ್ಲಿ 57/2 ರಲ್ಲಿ 1 ಎಕರೆ 2 ಗುಂಟೆ, 57/4 ರಲ್ಲಿ 18 ಗುಂಟೆ, 57/5 ರಲ್ಲಿ 18 ಗುಂಟೆ, 57/6 ರಲ್ಲಿ 19 ಗುಂಟೆ, 57/7 ರಲ್ಲಿ 20 ಗುಂಟೆ ಜಮೀನುಗಳು ನಿಮ್ಮ ಮಾವನಿಗೆ ಅವರ ತಂದೆಯಿಂದ ಅವರ ಸಹೋದರರ ಜೊತೆ ವಿಭಾಗದಲ್ಲಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ, ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

21. ನನ್ನ ಮಾವನಿಗೆ 4 ಜನ ಗಂಡು ಹಾಗೂ 2 ಹೆಣ್ಣು ಮಕ್ಕಳು. ಅವರು ಪುಟ್ಟರಾಜ, ನಾಗ, ಮಲ್ಲಯ್ಯ, ಮಲ್ಲಿಕಾರ್ಜುನ, ಸುನಂದ ಹಾಗೂ ಕಲ್ಯಾಣಿ. ನನ್ನ ಅತ್ತೆ ಕಾಳಮ್ಮ ಈಗಲೂ ಬದುಕಿದ್ದಾರೆ. ಸದರಿಯವರಿಗೆ ಎಲ್ಲರಿಗೂ ಸಹ ದಾವಾ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.

22. ನಿಮ್ಮ ಪತಿಯು ಪ್ರತಿವಾದಿಗಳಿಗೆ ಬರಬೇಕಾದ ಭಾಗಾಂಶವನ್ನು ಮೋಸದಿಂದ ನಿಮಗೆ ಮಾಡಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ